# ನೀಲಿ ತೋಳ

ಜನಪದ ಕಥೆಗಳು, ಪಂಚತಂತ್ರದ ಕಥೆಗಳು, ರಾಮಾಯಣ ಮಹಾಭಾರತದಲ್ಲಿನ ಉಪಕಥೆಗಳು ಹೊರನೋಟಕ್ಕೆ ಸರಳವಾಗಿದ್ದು, ಸಂದರ್ಭಾನುಸಾರಿಯಾಗಿ ರೂಪುಗೊಂಡಿವೆ. ನಮ್ಮ ಹಿಂದಿನವರು ಬದುಕಿದ ಕ್ರಮವನ್ನು ಹೇಳುತ್ತಲೇ ಮುಂದಿನವರು ಬದುಕಬೇಕಾದ ಕ್ರಮವನ್ನು ಸಹ ಅವು ನಿರಾಯಾಸವಾಗಿ ಹೇಳುತ್ತವೆ. ವ್ಯತ್ಯಾಸವಿಷ್ಟೇ; ಒಲೆ ಬದಲಾಗಿಲ್ಲ, ಉರಿ ಮಾತ್ರ ಬದಲಾಗಿದೆ.

ಸಾಮಾನ್ಯವಾಗಿ ಮನುಷ್ಯನ ಗುಣವನ್ನು ಕುರಿತು ಮಾತನಾಡುವಾಗ ಹಸುವಿನಂತಹವನು, ತೋಳದಂತವನು, ನರಿಬುದ್ಧಿಯವನು, ಮಂಗನಂತವನು, ಮೊಸಳೆಯಂತವನು ಹೀಗೆಲ್ಲಾ ಹೇಳುವುದುಂಟು. ಹೆಣ್ಣಿನ ವರ್ಣನೆಗಳು ಕೋಮಲವಾಗಿರುವುದರಿಂದ ಜಿಂಕೆಯ ಕಣ್ಣುಳ್ಳ ಹರಿಣಾಕ್ಷಿ, ನವಿಲಿನ ನಡೆಯುಳ್ಳ ಬೆಡಗಿ, ಮೀನಿನಂತೆ ಕಣ್ಣುಳ್ಳ ಮೀನಾಕ್ಷಿ ಹೀಗೆಲ್ಲಾ ಹೇಳುವ ಕ್ರಮ ನಮಗೆ ರೂಢಿಯಿಂದ ಬಂದಿದೆ. ಪಕ್ಷಿಗಳ ಗುಣ ಸೌಂದರ್ಯಗಳನ್ನು ಸಹ ನಾವು ಮನುಷ್ಯನನ್ನು ಬಿಂಬಿಸಲು ಬಳಸಿಕೊಂಡಿದ್ದೇವೆ. ಪಂಚತಂತ್ರದ ಕಥೆಗಳಲ್ಲಿ ಪ್ರಾಣಿ ಪಕ್ಷಿ, ಗಿಡ ಮರ, ಹಳ್ಳಕೊಳ್ಳ ಬೆಟ್ಟಗಳು, ಸೂರ್ಯಚಂದ್ರಾದಿಗಳೆಲ್ಲವನ್ನೂ ನಮ್ಮ ಕಥನಕಾರರು ಬಿಡದೆ ಮಾತನಾಡಿಸಿದ್ದಾರೆ.

ನಾಗರಿಕತೆಯ ಆರಂಭದಿಂದಲೂ ಮನುಷ್ಯ ತಿನ್ನಲು ಅರ್ಹವಾದ, ತಿನ್ನಲು ಬರುವ ಎಲ್ಲ ಪ್ರಾಣಿಗಳನ್ನು ತಿನ್ನುತ್ತಲೇ ಬಂದಿದ್ದಾನೆ. ಆಗ ಧರ್ಮಕರ್ಮಗಳ, ಜಾತಿವಿಜಾತಿಗಳ ಫಜೀತಿಗಳಿರಲಿಲ್ಲ.

ಮೊದಲ ಘಟ್ಟದಲ್ಲಿ ಬೆಂಕಿಯ ಬಳಕೆಯನ್ನು ಕಂಡುಕೊಂಡು, ಬೇಟೆಯಾಡಿದ ಮಾಂಸವನ್ನು ಸುಟ್ಟು ತಿನ್ನಲು ಕಲಿತ. ತಿನ್ನಬಹುದಾದ ಹಣ್ಣುಗಳನ್ನು ತಿಂದು ನೋಡಿದ. ಅರಗಿಸಿಕೊಳ್ಳುವ ಶಕ್ತಿಯ ಅನುಸಾರ ಅವನ ಆಹಾರದ ಅನ್ವೇಷಣೆ ಮುಂದುವರೆಯಿತು. ಬೇಸಾಯವನ್ನು ಕಲಿತ. ನಾಗರಿಕತೆಯ ಅರಿವು ಮೂಡಲಾರಂಭಿಸಿದ ಮೇಲೆ ಒಂದು ವರ್ಗ ಮಾಂಸಾಹಾರದಿಂದ ಪ್ರಜ್ಞಾಪೂರ್ವಕವಾಗಿ ದೂರಸರಿಯಿತು. ಮಾಂಸಾಹಾರದಲ್ಲೂ ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು ಎಂಬ ವರ್ಗೀಕರಣ ಮಾಡಲಾಯಿತು. ಮೊದಲ ಘಟ್ಟದಲ್ಲಿ ಸರ್ವರಿಗೂ ಸಮಾನವಾಗಿಯೇ ರೂಪುಗೊಂಡ ಆಹಾರ ಸಂಸ್ಕೃತಿ, ಮುಂದೊಂದು ದಿನ ಮಾಂಸಾಹಾರಿ ಸಸ್ಯಾಹಾರಿಗಳೆಂಬ ಪ್ರಭೇದಗಳನ್ನು ಸೃಷ್ಟಿಸುತ್ತದೆ, ಸಮಾಜದ ವಿಘಟನೆಗೆ ಕಾರಣವಾಗಿತ್ತದೆ ಎಂದು ಅಂದು ಯಾರೂ ಊಹಿಸಿರಲಿಲ್ಲ.

ಮನುಷ್ಯ ನಿರ್ಮಿತ ಕಥೆಗಳಲ್ಲಿ ಪ್ರಾಣಿಗಳಿಗೂ ಆಹಾರ ಹುಡುಕಾಟದ ಸಮಸ್ಯೆ ತಪ್ಪಿದ್ದಲ್ಲ. ಸ್ವಚ್ಛಂದ ವನಸಂಚಾರಿಗಳಾಗಿದ್ದರೂ ಬೇಟೆಯ ಸಾಮರ್ಥ್ಯದಂತೆ ಅವುಗಳ ಬದುಕು ನಡೆಯುತ್ತದೆ. ಅಲ್ಲಿಯೂ ಆಳರಸನಿದ್ದಾನೆ, ಮಂತ್ರಿಮಂಡಲವಿದೆ, ಗುಪ್ತಚಾರರಿದ್ದಾರೆ, ಸಬಲ ಹಾಗೂ ದುರ್ಬಲವಾದ ಜೀವಿಗಳಿದ್ದಾರೆ. ಜೊತೆಯಲ್ಲಿ ಠಕ್ಕತನಕ್ಕೆ ಸಂಕೇತಗಳೆನಿಸಿದ ನರಿ, ತೋಳ, ಮೊಸಳೆ, ಗೋಸುಂಬೆಗಳಿವೆ. ಈ ಪ್ರಾಣಿಗಳ ಸ್ವಭಾವ ಮನುಕುಲದಲ್ಲಿ ರೂಪಕಗಳೆನ್ನುವಂತೆ ಈಗಲೂ ಬಳಕೆಯಲ್ಲಿವೆ.

ಪಂಚತಂತ್ರದ ಒಂದು ಕಥೆಯಲ್ಲಿ ತೋಳಕ್ಕೆ ದಿನ ದಿನವೂ ಆಹಾರದ ಸಮಸ್ಯೆ ಎದುರಾಗುತ್ತಿರುತ್ತದೆ. ಬೇಟೆಯಾಡಿ ಪ್ರಾಣಿಗಳನ್ನು ಕೊಂದರೂ ಹಂಚಿಕೊಂಡು ತಿನ್ನುವ ಸಂಘಜೀವನದಲ್ಲಿ ಸಿಗುತ್ತಿದ್ದ ಆಹಾರ ಸ್ವಲ್ಪ ಮಾತ್ರವಾಗಿದ್ದು ಅದಕ್ಕೆ ಸಾಕಾಗುತ್ತಿರಲಿಲ್ಲ. ಆ ತೋಳಕ್ಕೆ ತಾನೊಬ್ಬನೇ ಸರ್ವಸ್ವತಂತ್ರನಾಗಿ ಬೇಟೆಯಾಡಿ ತಿಂದು ಜೀವಿಸುವ ಆಸೆ ಹುಟ್ಟಿಕೊಳ್ಳುತ್ತದೆ. ನಗರಕ್ಕೆ ಹೋದರೆ ಹೇಗೋ ರಸತುಂಬಿದ ಹಣ್ಣುಗಳು, ಸಾಕುಪ್ರಾಣಿಗಳು ತಿನ್ನಲು ಸಿಗುತ್ತವೆ ಎಂದು ಯೋಚಿಸಿ ಪಕ್ಕದ ನಗರಕ್ಕೆ ಹೋಗುತ್ತದೆ. ನಗರದ ನಾಯಿಗಳು ತಮ್ಮಂತೆಯೇ ಕಾಣುವ, ಆದರೆ ತಮ್ಮಂತೆ ಇಲ್ಲದ ಈ ಪ್ರಾಣಿಯನ್ನು ಕಂಡು ಬೊಗಳಲು ಆರಂಭಿಸುತ್ತವೆ. ಭಯದಿಂದ ಓಡಿದ ತೋಳ ಅಲ್ಲೇ ಕಂಡ ವಸ್ತ್ರಗಳಿಗೆ ಬಣ್ಣಹಾಕುವ ಬಣ್ಣಗಾರನ ಮನೆಯೊಳಗೆ ನುಗ್ಗುತ್ತದೆ. ತಿಳಿಯದೆ ಅಲ್ಲಿನ ಬಣ್ಣದ ಬಾನಿಯೊಳಗೆ ಬಿದ್ದುಬಿಡುತ್ತದೆ. ಅಲ್ಲಿಂದ ಎದ್ದು ಹೊರಬಂದಾಗ ಅದು ನೀಲಿಯ ತೋಳವಾಗಿರುತ್ತದೆ. ಮತ್ತೆ ಕಾಡಿನೆಡೆಗೆ ಓಡುತ್ತದೆ.

ಈ ತೋಳ ಓಡುತ್ತಾ ಓಡುತ್ತಾ ತನ್ನ ಜಾಗ ತಲುಪುತ್ತದೆ. ತನ್ನ ಜೊತೆಗಾರರೆಲ್ಲಾ ತನ್ನನ್ನು ಭಯ, ವಿಸ್ಮಯಗಳ ಕಣ್ಣಿನಿಂದ ನೋಡಿದಾಗ ನೀರಿನಲ್ಲಿ ತನ್ನ ಪ್ರತಿಬಿಂಬ ನೋಡಿಕೊಂಡು ತಾನು ಬದಲಾಗಿದ್ದೇನೆ ಎಂಬ ಸತ್ಯವನ್ನು ಅರಿಯುತ್ತದೆ. ಠಕ್ಕ ಬುದ್ಧಿಯ ಅದು ನೀಲಿ ತೊಗಲಿನ ತನ್ನ ಬಣ್ಣವನ್ನು ಬಂಡವಾಳ ಮಾಡಿಕೊಳ್ಳಬೇಕೆಂದು ಯೋಚಿಸುತ್ತದೆ. ‘ತಾನು ದೇವಲೋಕದಿಂದ ಬಂದಿದ್ದೇನೆ, ಇಂದ್ರಾದಿ ದೇವತೆಗಳು ನನ್ನನ್ನು ಇಲ್ಲಿಗೆ ಕಳಿಸಿದ್ದಾರೆ, ನಾನೇ ನಿಮ್ಮ ಪ್ರಭು’ ಎಂದು ಆಡಳಿತವನ್ನು ತನ್ನ ಕೈಗೆ ತೆಗೆದುಕೊಳ್ಳುತ್ತದೆ.

ನೀಲಿತೋಳದ ಆಳ್ವಿಕೆಯಲ್ಲಿ ಬೆಟ್ಟದ ಮೇಲೆ ನಿಂತು ಸರ್ವರ ಕ್ಷೇಮವನ್ನು ಕಾಣುವ ಸಿಂಹ ನೋಟವಾಗಲಿ, ಧೀರೋದಾತ್ತವಾದ ನಡಿಗೆಯಾಗಲಿ ಇರಲಿಲ್ಲ. ಸರ್ವ ಪಕ್ಷಿ–ಪ್ರಾಣಿ ಸಂಕುಲದ ಹಿತಾಸಕ್ತಿ ಅದಕ್ಕೆ ಬೇಕಿರಲಿಲ್ಲ. ತನ್ನ ನಿಜದ ಅಸ್ತಿತ್ವವನ್ನು ಕಂಡು ಹಿಡಿಯುತ್ತವೆ ಎಂಬ ಕಾರಣದಿಂದ ಕುಲಬಾಂಧವರಾದ ತೋಳಗಳ ಹಿಂಡನ್ನೇ ಅದು ದೂರ ಅಟ್ಟಿಬಿಡುತ್ತದೆ. ಪ್ರಾಣಿಗಳು ಬೇಟೆಯಾಡಿ ತಂದ ಮಾಂಸವನ್ನು ಖುಷಿಯಿಂದ ತಿನ್ನುತ್ತಾ, ಕೇವಲ ಮಾಂಸದ ಹಂಚಿಕೆ ಕೆಲಸ ಮಾಡುತ್ತಾ ಆಲಸಿಯಾಗಿ ಮೈ ಬೆಳೆಸಿಕೊಳ್ಳುತ್ತದೆ. ಸಾಮಾನ್ಯ ಪ್ರಾಣಿಗಳನ್ನು ಗಮನದಲ್ಲಿಟ್ಟುಕೊಂಡು ಆಳ್ವಿಕೆ ಮಾಡಬೇಕಾಗಿದ್ದನ್ನು ಮರೆತು ಅವರವರಲ್ಲೇ ಕಚ್ಚಾಡುವಂತೆ ಮಾಡಿ ತಾನು ತನ್ನ ಸ್ಥಾನ ಭದ್ರ ಮಾಡಿಕೊಳ್ಳುತ್ತದೆ. ನಿಜ ವೇಷವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳುತ್ತದೆ.

ಎಷ್ಟುದಿನ ತಾನೆ ಹೀಗೇ ಇರಲು ಸಾಧ್ಯ. ಎಲ್ಲದಕ್ಕೂ ಒಂದು ಅಂತ್ಯವೆನ್ನುವುದು ಇರುತ್ತದಲ್ಲವೇ? ಒಂದು ದಿನ ಹುಣ್ಣಿಮೆ ಬರುತ್ತದೆ. ಹುಣ್ಣಿಮೆಯ ದಿನ ತೋಳಗಳೆಲ್ಲವೂ ಬೆಟ್ಟವನ್ನೇರಿ ಕೂಗಲಾರಂಭಿಸುತ್ತವೆ ಎಂಬುದು ಒಂದು ನಂಬಿಕೆ. ಅಂತೆಯೇ ನೀಲಿತೋಳ ದೂರವಿರಿಸಿದ್ದ ಅದರ ಕುಲಬಾಂಧವ ತೋಳಗಳ ಗುಂಪೆಲ್ಲವೂ ಒಂದು ಕಡೆ ಸೇರಿ ಕೂಗಿಡಲು ಆರಂಭಿಸುತ್ತವೆ. ಮೈಬಣ್ಣ ನೀಲಿಯಾದರೇನಂತೆ, ಅಂತರಂಗದ ಬಣ್ಣ ಬದಲಾಗಲು ಸಾಧ್ಯವೇ? ಅದುಮಿಡಲು ಪ್ರಯತ್ನಿಸಿದಷ್ಟೂ ಅದು ಹೊರಕ್ಕೆ ಚಿಮ್ಮಲು ಪ್ರಯತ್ನಿಸುತ್ತದೆ. ನೀಲಿ ತೋಳಕ್ಕೆ ಎದೆಯ ದನಿಯನ್ನು ಹತ್ತಿಕ್ಕಲಾಗಲಿಲ್ಲ. ಅದು ತಾನು ಅರಸನೆಂಬುದನ್ನು ಮರೆತು ತೋಳದ ದನಿಯಲ್ಲಿ ಮೊರೆಯಲಾರಂಭಿಸಿತು. ತಕ್ಷಣವೇ ಅಲ್ಲಿನ ಎಲ್ಲಾ ಪ್ರಾಣಿಗಳಿಗೂ ತಮ್ಮನ್ನು ಆಳಿದ್ದು ತೋಳ ಎಂದು ತಿಳಿಯಿತು. ಅಲ್ಲಿಂದ ಹೀನಾಯವಾಗಿ ಹೊರದಬ್ಬಿಸಿಕೊಂಡ ಅದು ಮತ್ತೆ ಹೊಟ್ಟೆ ತುಂಬಿಸಿಕೊಳ್ಳುವ ದಾರಿ ಹುಡುಕುತ್ತಾ ಕಾಡಿಂದ ಕಾಡಿಗೆ ಅಲೆಯುತ್ತಾ ಹೋಯಿತು.

ಪ್ರಭುತ್ವ, ಗದ್ದುಗೆ ಪೊರೆಯಲು ಎಲ್ಲರಿಗೂ ಸಾಧ್ಯವಿಲ್ಲ. ವಿಶ್ವ ಮಾನವತೆಯ ಕನಸು ಕಂಡವರು ಮಾತ್ರ ಸರ್ವಸಮಾನತೆಯ ಬದುಕನ್ನು ಕಟ್ಟಬಲ್ಲರು ಎನ್ನುವ ಸಾರ್ವಕಾಲಿಕ ಸತ್ಯದ ಉದಾಹರಣೆಯಂತೆ ‘ನೀಲಿ ತೋಳ’ದ ಕಥೆ ಕಾಣಿಸುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಶುಭ ನುಡಿಯೋ ಸೋಮ ಅಂದರೆ ಗೂಬೆ ಕಾಣ್ತಿದ್ದಲ್ಲೋ ಮಾಮ ಅಂದಹಾಗೆ.

  —ಗಾದೆ

- ಪ್ರೀತಿಯಿಂದಾಡಿದ ಪ್ರತಿಯೊಂದು ನುಡಿಯು ಸಿಡಿಲಿನಂತೆ ಪರಿಣಾಮಕಾರಿ.

  —ಸ್ವಾಮಿ ವಿವೇಕಾನಂದ.

- ಜೀವನದ ಅಂತ್ಯದಲ್ಲಿ ಶತ್ರುಗಳ ಕೋಪದ ನುಡಿಗಳು ನೆನಪಾಗುವುದಿಲ್ಲ. ಸ್ನೇಹಿತರ ಮೌನ ಕಾಡುತ್ತಿರುತ್ತದೆ.

  —ಮಾರ್ಟಿನ್ ಲೂಥರ್

- ದೈವ ಸಹಾಯವಿಲ್ಲದೆ ಜಯವಿಲ್ಲ. ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ಇಲ್ಲ.

  —ಡಿ.ವಿ.ಜಿ.

- ಸತ್ಯವನ್ನು ಹೇಳುವವನು, ಸ್ವಾರ್ಥವನ್ನು ಗೆದ್ದವನು ನಿಜವಾದ ಸುಖಿ.

  —ಬುದ್ಧ